## ಬುತ್ತಿ ಚಿಗುರು

### ನಾಚಿಕೆ ಯಾಕೆ?

ತಿಮ್ಮ ಹೆಂಡತಿಯೊಂದಿಗೆ ಔತಣಕೂಟಕ್ಕೆ ಹೋಗಿದ್ದ. ಐದಾರು ಸಲ ಅವನು ಐಸ್‌ಕ್ರೀಮ್ ತಂದು ತಿನ್ನುತ್ತಿರುವುದನ್ನು ನೋಡಿ, ''ಪದೇ ಪದೇ ಐಸ್‌ಕ್ರೀಮ್ ಕೇಳಿ, ತಂದು ತಿನ್ನುತ್ತಿದ್ದೀರಲ್ಲ, ನಿಮಗೆ ನಾಚಿಕೆಯೇ ಆಗುವುದಿಲ್ಲವೆ?'' ಎಂದಳು ಪಿಸುದನಿಯಲ್ಲಿ. ತಿಮ್ಮ ಹೇಳಿದ, ''ನಾಚಿಕೆ ನನಗೆ ಯಾಕಾಗಬೇಕು? ನಿನಗೇ ಆಗಬೇಕು. ನಾನು ಪ್ರತಿ ಸಲ ಐಸ್‌ಕ್ರೀಮ್ ತರುವಾಗಲೂ ನಿನ್ನ ಕಡೆಗೆ ಕೈ ತೋರಿಸಿ, 'ನನಗಲ್ಲ, ಅವಳಿಗೆ' ಅಂತ ಹೇಳಿಯೇ ತಂದಿದ್ದೇನೆ'' ಎಂದ.

**ಪ. ರಾಮಕೃಷ್ಣ ಶಾಸ್ತ್ರಿ**



---



### ಆರೋಗ್ಯ ಸಲಹೆ

'ದಿನಾ ಇಲ್ಲೇ ಬಂದು ಸಾಯ್ತೀಯಲ್ಲ, ಇದೊಂದೇ ಮನೆ ಹಿಡಿದಿದ್ದೀಯಾ? ಈ ಓಣೀಲಿ ಬೇರೆ ಯಾವ ಮನೆಗಳೂ ಇಲ್ವೇ?' ಎಂದು ಭಿಕ್ಷೆ ನೀಡುತ್ತಾ ಗೊಣಗುತ್ತಿದ್ದ ಪಾರ್ವತಮ್ಮನಿಗೆ ಭಿಕ್ಷುಕ ಹೇಳಿದ, 'ಹಾಗೇನಿಲ್ಲಮ್ಮಾ, ಸಾಕಷ್ಟು ಮನೆಗಳಿವೆ. ಆದ್ರೆ, ಮೊನ್ನೆ ಡಾಕ್ಟರ್ ಹತ್ರ ಚೆಕಪ್‌ಗೆ ಹೋಗಿದ್ದೆ. ವಯಸ್ಸಾಯ್ತಲ್ಲಾ? ದಿನಕ್ಕೊಂದು ಕಡೆ ತಿಂದು ಆರೋಗ್ಯ ಕೆಡಿಸ್ಕೋಬೇಡ ಅಂತಾ ಹೇಳಿದ್ದಾರಮ್ಮಾ. ಅದಕ್ಕೇ ಒಂದೇ ಮನೆ ಹಿಡಿದಿದ್ದೀನಿ' ಎಂದು ಹೇಳಿ ಹೊರಟುಹೋದ.

**ಪ.ನಾ.ಹಳ್ಳಿ ಹರೀಶ್ ಕುಮಾರ್**